ನಕ್ಷತ್ರ ಪಟ



## ವಿಜಯಶ್ರೀ ಎಂ. ಹಾಲಾಡಿ

ಚಿತ್ರ: ಸೌಮ್ಯಪ್ರಭು ಕಲ್ಯಾಣ್‌ಕರ್



# ನಿನ್ನೆಯವರೆಗೂ ಎಲ್ಲವು ಚಂದ

ಕಾಡುಕೋಳಿಯ ಸಂಗೀತಕ್ಕೆ
ಬೆಳಗಾಗುವುದು ನಮಗೆ
ಇರುಳಲಿ ಗುಮ್ಮ ಕೂಗಿದ ಮೇಲೆ
ನಿದ್ದೆಯು ಬರುವುದು ಕೊನೆಗೆ

ತಿಂಗಳ ಬೆಳಕು ಮುದ್ದಿಸುವಾಗ
ಬಾಳೆ ಹಾಳೆಯ ಊಟ
ಟಿಟ್ಟಿಭ ಬಾವಲಿ ಮಾತಾಡುತ್ತಾ
ನರಿಗಳ ಜೊತೆಗೆ ಕೂಟ

ನಾಯಿಕುರ್ಕ ಗುಡ್ಡೆಹೆಗ್ಗಳ
ಅಲೆದಾಡುವ ಈ ಜಾಗ
ಮನೆಮನೆಯಂತೂ ಬೆಚ್ಚಗೆ ಮಲಗಿವೆ
ಕನಸಿನ ಲೋಕದ ಧ್ಯಾನ

ತುದಿಯು ಮೊದಲು ಯಾವುದು ಇಲ್ಲ
ಚಿಣ್ಣರ ಸಂತೋಷಕ್ಕೆ
ಕಾಡು ಮೇಡು ಅಲೆದು ಕುಣಿದು
ಕಾಲಲಿ ಬಿಳಿ ಬಿಳಿ ಬೊಕ್ಕೆ!

ನಿನ್ನೆಯವರೆಗೂ ಎಲ್ಲವು ಚಂದ
ಮರಗಳು ಉರುಳಿವೆ ಇಂದು
ಜೆಸಿಬಿಯ ತೋಳನು ಹಿಡಿದು
ರೋದಿಸುತಿವೆ ಮೊಲಗಳ ಹಿಂಡು!